ಇಂದು ದಿನಾಂಕಃ14.12.2023 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ 1 ರಿಂದ 3 ರವರ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ

1. ನಾನು ಎಂ.ಎ ಪದವೀಧರೇ. ನನಗೆ ಮದುವೆಯಾಗಿದೆ. ನನ್ನ ಗಂಡನ ಮನೆ ದಾವಣಗೆರೆ. ನಾನು ಮದುವೆಯಾಗಿ 6 ವರ್ಷಗಳಿಂದ ನನ್ನ ಗಂಡನ ಮನೆಯಾದ ದಾವಣಗೆರೆಯಲ್ಲಿ ವಾಸವಿದ್ದೇನೆ. ಜಿ.ಎಂ.ಸುಬ್ರಾಯಚಾರ್ ರವರ ತಂದೆಯ ಹೆಸರು ಮಂಜಾಚಾರ್. ಮಂಜಾಚಾರ್ ರವರಿಗೆ 3 ಜನ ಮಕ್ಕಳು. ಜಿ.ಎಂ.ರಾಮಚಂದ್ರರವರೂ ಸಹ ಮಂಜಾಚಾರ್ ರವರ ಮಗ ಎಂದರೆ ಸರಿ. ನಾನು ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿ. ಮಂಜಾಚಾರ್ ರವರು ಬದುಕಿದಾಗ ಅವರು ಮತ್ತು ಅವರ ಮಕ್ಕಳ ನಡುವೆ ವಿಭಾಗವಾಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಆ ನಂತರ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ಪಾಲು ಯಾವ ವರ್ಷವಾಗಿರುತ್ತದೆ ಎಂದು ನನಗೆ ನೆನಪಿಲ್ಲ. ಅದು ಯಾರ ಯಾರ ನಡುವೆ ಆಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಆ ಪಾಲಿನ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲಾತಿ ಇಲ್ಲ. ಜಿ.ಎಂ.ರಾಮಚಂದ್ರಚಾರ್ ಬದುಕಿದ್ದಾರೆ ಎಂದರೆ ಸರಿ.

2. ದಾವಾ ಆಸ್ತಿಗಳು ಜಿ.ಎಂ.ಸುಬ್ರಾಯಚಾರರವರಿಗೆ ಹೇಗೆ ಬಂತು ಎಂದು ನನಗೆ ಹೇಳಲು ಆಗುವುದಿಲ್ಲ. ಜಿ.ಎಂ.ಸುಬ್ರಾಯಚಾರ್ ರವರು ಗೌಡಹಳ್ಳಿ ವಾಸಿ ಎಂದರೆ ಸರಿ. ಅವರು ದಿನಾಂಕಃ21.10.2006 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರು ಅವರು ವಾರಸುದಾರರು ಎಂದರೆ ಸಾಕ್ಷಿಯು ನಾನೂ ಸಹ ಅವರ ವಾರಸುದಾರಳು ಎಂದು ನುಡಿಯುತ್ತಾರೆ. ಜಿ.ಎಸ್.ಅಶ್ವಥ್ ಮತ್ತು ಜಿ.ಎಸ್ ಅವಿನಾಶ್ ವಿದ್ಯುತ್ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿರವರ ಮರಣದ ನಂತರ ಪರಿಹಾರವನ್ನು ಕೋರಿ, ನಾನು ಮತ್ತು ಜಿ.ಎಂ.ಸುಬ್ರಾಯಚಾರ್ ರವರು ಚಿಕ್ಕಮಗಳೂರಿನ ಹಿರಿಯ ಸಿವಿಲ್ ನ್ಯಾಯಾದೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.206/2002 ರಂತೆ ದಾವೆ ಹೂಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಈಗ ದಾವೆಯ ವಾದಪತ್ರವನ್ನು ತೋರಿಸಿ, ನಾವು ಹೂಡಿದ ದಾವೆಯ ವಾದಪತ್ರ ಎಂದು ಸೂಚಿಸಲಾಗಿ, ಸಾಕ್ಷಿಯು ಒಪ್ಪಿಕೊಂಡ ಕಾರಣ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ದಾವೆಯನ್ನು ದಾಖಲಿಸುವಾ ಕಾಲಕ್ಕೆ ನಾನು ಅಪ್ರಾಪ್ತ ವಯಸ್ಕಳಾಗಿದ್ದೆ ಎಂದರೆ ಸರಿ. ಆ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸಾಕ್ಷಿಗೆ ಅಸಲು ದಾವಾ ಸಂ.206/2002 ರ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ಪ್ರತಿಗಳನ್ನು

ತೋರಿಸಲಾಗಿ ಹೌದು ಎಂದು ಒಪ್ಪಿಕೊಂಡ ಕಾರಣ, ಅವುಗಳನ್ನು ನಿಡಿ-2 ಮತ್ತು 3 ಎಂದು ಗುರುತಿಸಲಾಯಿತು.

3. ನನ್ನ ತಾಯಿಯ ಹೆಸರು ರತ್ನ ಎಂದರೆ ಸರಿ. ಅಸಲು ದಾವಾ ಸಂ.206/2002 ದಾವೆಯನ್ನು ಸಲ್ಲಿಸುವ ಕಾಲಕ್ಕೆ ನನ್ನ ತಾಯಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಮರಣದ ಹೊಂದಿದ ನಂತರ, ನನ್ನ ತಂದೆ ಪ್ರತಿವಾದಿ 1 ರವನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಅಸಲು ದಾವಾ ಸದ.206/2002 ರ ಪ್ರತಿವಾದಿ 1 ರವರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಆ ದಾವೆಯ ಡಿಕ್ರಿಯ ಹಣವನ್ನು ಸಂಪೂರ್ಣವಾಗಿ ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ಪೂರ್ತಿ ಪರಿಹಾರದ ಹಣವನ್ನು ಪಡೆದುಕೊಂಡಿದ್ದೇನೆ ಎಂದು ಒಪ್ಪಿಕೊಂಡರೇ ನನಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಮಗ ಬಂದ ಪರಿಹಾರದ ಹಣದಲ್ಲಿ ರೂ.3,30,000/-ಗಳನ್ನು ಬ್ಯಾಂಕಿನಲ್ಲಿ ನನ್ನ ಹೆಸರಿಗೆ ಎಫ್.ಡಿ. ಇಟ್ಟಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಪರಿಹಾರದಲ್ಲಿ ತಮಾಗ ಸಹ ಪಾಲು ಬರಬೇಕೆಂದು ಪ್ರತಿವಾದಿ 1 ರವರು ಚಿಕ್ಕಮಗಳೂರಿನ ಹಿರಿಯ ಸಿವಿಲ್ ನ್ಯಾಯಾದೀಶರ ನ್ಯಾಯಾಲಯದಲ್ಲಿ ಪಿ ಅಂಡ್ ಎಸಿ.ನಂ.6/2008 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯು ದಿನಾಂಕಃ28.10.2010 ರಂದ ಮುಕ್ತಾಯಗೊಂಡ, ಪ್ರತಿವಾದಿ 1 ರವರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದ ಮುಂದೆ ರುಜುವಾತುಪಡಿಸಬೇಕೆಂದು ಆದೇಶವಾಗಿತ್ತು ಎಂದರೆ ನನಗೆ ನೆನಪಿಲ್ಲ.

4. ಪರಿಹಾರದ ಹಣವೂ ಪ್ರತಿವಾದಿ1 ರವರಿಗೆ ತಲುಪಬಾರದೆಂಬ ಕಾರಣದಿಂದ ನಾನು ಪೂರ್ತಿ ಹಣವನ್ನು ಪರಿಹಾರದ ಹಣ ತೆಗೆದುಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂ.206/2002 ರಲ್ಲಿನ ಪರಿಹಾರದ ಹಣದ ವಿಚಾರವನ್ನು ನಾನು ಈ ದಾವೆಯಲ್ಲಿ ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ. ಪರಿಹಾರದ ಹಣದಲ್ಲಿ ಪ್ರತಿವಾದಿ 1 ರವರು ತಮಗೆ ಪಾಲು ಬರಬೇಕೆಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಅದಕ್ಕೆ ನಾನು ಯಾವುದೇ ರೀತಿ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಿಗೆ ಪ್ರತಿವಾದಿ 1 ರಿಂದ 3 ರವರೇ ಸಂಪೂರ್ಣ ಹಕ್ಕುದಾರರು ಎಂದರೆ ಸರಿಯಲ್ಲ. ಅವುಗಳ ಮೇಲೆ ನನಗೆ ಯಾವುದೇ ಹಕ್ಕುಇಲ್ಲ ಎಂದರೆ ಸರಿಯಲ್ಲ. ನಿಪಿ-18 ಅನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ಈ ದಾವೆಗೆ ಸಂಬಂದಿಸಿದಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ದಾವಾ ಆಸ್ತಿಗಳಲ್ಲಿ ಸಾಲ ಇರುವ ಬಗ್ಗೆನಮೂದಿಸಲಾಗಿದೆ ಎಂದರೆ ಸಾಕ್ಷಿಯು ಆಸ್ತಿಗಳ ಮೇಲೆ ನನಗೆ ತಿಳಿದಿರುವ ಹಾಗೆ ಸಾಲ

ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

5. ಸಾಲ ಮರುಪಾವತಿಯಾಗಿರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನೋಡಿಲ್ಲ. ಅಸಲು ದಾವಾ ಸಂ.206/2002 ರಲ್ಲಿ ಪರಿಹಾರದಲ್ಲಿ ಪ್ರತಿವಾದಿ 1 ರವರಿಗೆ ನಾನು ಪಾಲು ಕೊಡಲು ನಾನು ಭಾದ್ಯಸ್ಥಳಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಪರಿಹಾರದ ಹಣದಲ್ಲಿ ಪಾಲು ಕೊಡಬೇಕೆಂದು ಕೇಳಿದ ಕಾರಣ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಕೀಲರಿಗೆ ಮೂಲಕ ನೊಟಿಸು ನೀಡಿಸಿದಾಗ ಅದಕ್ಕೆ ಉತ್ತರ ನೀಡುವ ಅವಶ್ಯಕತೆ ಇಲ್ಲ ಎಂದು ಪ್ರತಿವಾದಿ 1 ರವರಿಗೆ ನಾನೇ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುಕದೇ ಹಕ್ಕು ಇರದ ಕಾರಣ ಪ್ರತಿವಾದಿ 1 ರಿಂದ 3 ರವರು ನನಗೆ ಪಾಲುಕೊಡುವ ಪ್ರಶ್ನೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ದಾವಾ ಆಸ್ತಿಗಳ ಮೇಲೆ ಸುಳ್ಳು ಹಕ್ಕು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಪ್ರತಿವಾದಿ 4 ರವರ ಪರ ವಕೀಲರು ಸಮಯವಕಾಶವನ್ನು ಕೊರಿದ್ದು, ಮಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ